# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ

# ತಪ್ಪಿಹೋದ ಮಗನು



ಬರಹಗಾರರು: Edward Hughes
ಚಿತ್ರಲೇಖಕರು: Lazarus
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen; Sarah S.

60ರ 45ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*

**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.**
**ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**

ಕನ್ನಡ | Kannada



ಯೇಸು ಜನರಿಗೆ ದೇವರ ಕ್ಷಮಾಪನೆಯ ಬಗ್ಗೆ ಹೇಳುತ್ತಿದ್ದನು. ಆದರೆ ಯೆಹೂದ್ಯರು ಯೇಸು ಪಾಪಿಗಳ ಸಂಗಡ ಸ್ನೇಹಬೆಳೆಸುವುದನ್ನು ದೂರುತ್ತಿದ್ದರು.

1



ಅದಕ್ಕಾಗಿ ಯೇಸು ಮೂರು ಕಥೆಗಳನ್ನು ಅವರಿಗೆ ವಿವರಿಸಿ, ಪಾಪಿಗಳು ಪಶ್ಚಾತಾಪ ಪಟ್ಟಾಗ ದೇವರು ಹೇಗೆ ಸಂತೋಷಿಸುತ್ತಾನೆ ಎಂದು ತೋರಿಸಿದನು.

2


ಮೊದಲನೆಯ ಕಥೆಯಲ್ಲಿ
ಒಬ್ಬ ಮನುಷ್ಯನಿಗೆ ನೂರು
ಕುರಿಗಳಿದ್ದವು. ಒಂದು
ಕಳೆದು ಹೋಯಿತು.
3
ಆಗ ಅವನು ಅದೇ ಕ್ಷಣದಲ್ಲಿ
ತನ್ನ ತೊಂಬತ್ತೊಂಬತ್ತು
ಕುರಿಗಳನ್ನು ಅಲ್ಲೇ
ಬಿಟ್ಟು ಕಳೆದುಹೋದ
ಕುರಿಯನ್ನು
ಹುಡುಕಲು
ಹೊರಟನು.
4
ಕುರುಬನು ಕಳೆದುಹೋದ
ಕುರಿಯು ಸಿಗುವವರೆಗೆ
ಹುಡುಕಾಡಿದನು. ಅದು ಸಿಕ್ಕಾಗೆ
ಅದನ್ನು ತನ್ನ ಹೆಗಲ ಮೇಲೆ
ಇಟ್ಟುಕೊಂಡು ಸೊಂತೋಷದಿಂದ
ಹಿಂತಿರುಗಿ ತನ್ನ ಸ್ನೆಹಿತರಿಗೆ ಈ
ಕುರಿಯು ಕಳೆದು ಹೊಗಿತ್ತು
ಆದರೆ ಮತ್ತೆ ನನಗೆ ಸಿಕ್ಕಿತು,
ಎಲ್ಲರು ನನ್ನೊಡನೆ ಸಂತೋಷಿಸಿ
ಎಂದು ಹೇಳಿದನು.
5
ಒಬ್ಬ ಪಾಪಿಯು ತನ್ನ ಪಾಪಗಳಿಂದ
ಪಶ್ಚಾತಾಪ ಪಡುವುದಾದರೆ
ಪರಲೋಕದಲ್ಲಿ ಮಾಹಾ
ಸಂತೋಷವಿರುತ್ತದೆಂದು
ಯೇಸು ವಿವರಿಸಿದನು.
ಪಶ್ಚಾತಾಪ ಪಡುವುದೆಂದರೆ
ನಮ್ಮ ಪಾಪಗಳನ್ನು
ಒಪ್ಪಿಕೊಂಡು ಮತ್ತೆ
ಅವುಗಳನ್ನು
ಮಾಡದಿರುವುದಾಗಿದೆ.
6
ಯೇಸು ಮತ್ತೊಂದು ಕಥೆಯನ್ನು
ಹೇಳಿದನು ಅದೆನೆಂದರೆ– ಒಬ್ಬ
ಸ್ತ್ರೀಯ ಹತ್ತಿರ ಹತ್ತು ನಾಣ್ಯಗಳಿದ್ದವು.
ಅದು ಅವಳ ಎಲ್ಲಾ
ಸಂಪಾದನೆಯಾಗಿರಬಹುದು. ಒಂದು
ದುರದುಷ್ಟಕರ ಸಂಗತಿ ನಡೆಯಿತು.
ಆವಳಲ್ಲಿದ್ದ ನಾಣ್ಯಗಳಲ್ಲಿ ಒಂದು
ನಾಣ್ಯ ಕಳೆದು ಹೋಯಿತು.
7
ಅವಳು ಮನೆಯನ್ನು ಗೂಡಿಸಿ! ಗೂಡಿಸಿ! ಗೂಡಿಸಿ!
ಎಲ್ಲಾ ಕಡೆಯು ಹುಡುಕಾಡಿದಳು. ಕೂನೆಯಲ್ಲಿ
ಅವಳಿಗೆ ಕಳೆದುಕೊಂಡ ನಾಣ್ಯವು ಸಿಕ್ಕಿತು.
8

ಅವಳಿಗೆ ತುಂಬಾ ಆನಂದವಾಗಿ ಏನು
ಮಾಡಿದಳು ಗೊತ್ತೇ? ಅವಳು ತನ್ನ
ಎಲ್ಲಾ ಸ್ನೇಹಿತರಿಗೂ ಹೇಳಿದಳು.



9

“ಒಬ್ಬ ಪಾಪಿಯು
ತನ್ನ ಪಾಪಗಳಿಂದ
ಪಶ್ಚಾತಾಪ
ಪಡುವುದಾದರೆ
ದೇವರ
ಸಮ್ಮುಖದಲ್ಲಿ
ದೇವದೂತರು
ಸಂತೋಷಿಸುವರು”
ಎಂದು ಯೇಸು
ಹೇಳಿದನು.



10

ಯೇಸು ಹೇಳಿದ ಮೂರನೆಯ ಕಥೆಯು
ದುಃಖದಿಂದ ಕೂಡಿತ್ತು. ಅದು ಒಬ್ಬ
ಹುಡುಗನು ತನ್ನ ತಂದೆಯ
ಮನೆಯನ್ನು ಬಿಟ್ಟು ಹೋದ
ಕಥೆಯಾಗಿತ್ತು.



11

ದೂರದ ದೇಶಕ್ಕೆ ಹೋಗಿ ಮನ ಬಂದಂತೆ ತನ್ನ ಎಲ್ಲಾ ಹಣವನ್ನು ವ್ಯಯ
ಮಾಡಿದನು. ಅದೇ ಸಮಯಕ್ಕೆ ಅಲ್ಲಿ ಬರಗಾಲ ಬಂತು, ಏನು ಮಾಡಬೇಕೆಂದು
ಆ ಹುಡುಗನಿಗೆ ತಿಳಿಯದೆ ಹೊದದ್ದರಿಂದ ಹಸಿವೆಯಿಂದ ಬಳಲಿ ಸಾಯುವ
ಹಾಗಾದನು.



12

ಹಸಿವೆಯನ್ನು ತಿರಿಸಿಕೊಳಲು ಆ ಹುಡುಗನು ಹಂದಿಗಳನ್ನು ಕಾಯುವ ಕೆಲಸಕ್ಕೆ
ಸೇರಿದನು. ಆದರೆ ಅವನಿಗೆ ಯಾರೂ ಆಹಾರವನ್ನು ಕೊಡಲಿಲ್ಲ. ಹಂದಿಗೆ
ಹಾಕುವ ಆಹಾರವನ್ನು ತಿಂದು ಹಸಿವೆಯನ್ನು ತೀರಿಸಿಕೊಳ್ಳಲು ಆಶೆಪಟ್ಟನು.
ಆಗ ಅವನಿಗೆ ಬುದ್ದಿಬಂತು, ತನ್ನ ತಂದೆಯ ಮನೆಯಲ್ಲಿ ಆಳುಗಳು ಸಹ
ಹೊಟ್ಟೆ ತುಂಬಾ ಊಟಮಾಡುತ್ತಾರೆಂದು ನೆನಪಿಗೆ
ತಂದುಕೊಂಡನು.



13

“ನಾನು ತಂದೆಯ ಮನೆಗೆ ಹೋಗಿ
ನಾನು ಮಾಡಿದ ಪಾಪಕ್ಕೆ
ಕ್ಷಮಾಪನೆ ಕೇಳುವೆನು, ಅವನ
ಮಗನೆನಿಸಿಕೊಳ್ಳಲು ಯೂಗ್ಯನಲ್ಲ,
ನನನ್ನು ತನ್ನ ಸೇವಕರಲ್ಲಿ
ಒಬ್ಬನನ್ನಾಗಿ ಮಾಡಿಕೊಂಡರೆ
ಸಾಕು” ಎಂದು ನೆನೆಸಿದನು.



14













ತಪ್ಪಿಹೋದ ಮಗನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಲೂಕ 15

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.